<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 24.07.2026</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

1. ನಾನು ಬಿ ಎ ಪದವಿದಾರನಾಗಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಬರೆಯಲು ಓದಲು ಬರುತ್ತದೆ. ಆರೋಪಿಯು ನನಗೆ 20 ವರ್ಷದಿಂದಲೂ ಪರಿಚಯ ಇರುತ್ತದೆ. ಆತನ ಅಣ್ಣನ ಹೆಸರು ಲಕ್ಷ್ಮಿ ನಾರಾಯಣ ಆಗಿದೆ. ಅವರ ಪರಿಚಯ ಇಲ್ಲ, ಆದರೆ ಅವರನ್ನು ನೋಡಿದ್ದೇನೆ. ಈ ಪ್ರಕರಣದ ವ್ಯವಹಾರಕ್ಕಿಂತ ಮೊದಲು ಆರೋಪಿಗೂ ಮತ್ತು ನನಗೂ ಹಣದ ವ್ಯವಹಾರ ನಡೆಯುತ್ತಿತ್ತು. ನನ್ನ ಮತ್ತು ಆತನ ನಡುವೆ ಲಕ್ಷಗಳ ಹಣದ ವ್ಯವಹಾರ ನಡೆಯುತ್ತಿತ್ತು. 2022 ಕ್ಕಿಂತ ಮೊದಲು ಪಡೆದ ಹಣವನ್ನು ವಾಪಸ್ಸು ಕೊಟ್ಟಿದ್ದರು ಆದರೆ 2022 ರಲ್ಲಿ ಪಡೆದ ಹಣ ವಾಪಸ್ಸು ಕೊಟ್ಟಿರಲಿಲ್ಲ. ಆರೋಪಿಯ ಅಣ್ಣ ಲಕ್ಷ್ಮಿ ನಾರಾಯಣರವರು ನನ್ನೊಂದಿಗೆ ಹಣದ ವ್ಯವಹಾರ ಮಾಡಿಲ್ಲ.

2. ಆರೋಪಿಯ ಕುಟುಂಬದಲ್ಲಿ ಅವರ ಪತ್ನಿ, ಮಗ, ಮಗಳು ಇರುತ್ತಾರೆ, ಉಳಿದವರು ಗೊತ್ತಿಲ್ಲ. 2019 ರಿಂದ 2021 ರ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹರಡಿದ್ದ ಕಾರಣ ಆಗ ಜೀವನ ನಿರ್ವಹಣೆ ಮಾಡಲು ಸ್ವಲ್ಪ ಕಷ್ಟಕರವಾಗಿತ್ತು. ನಾನು ಆ ಸಮಯದಲ್ಲಿ ಮನೆಯಲ್ಲಿದ್ದು ಕೆಲಸ ಮಾಡುತ್ತಿದ್ದೆ. ನನಗೆ ಆ ಸಮಯದಲ್ಲಿ ಆದಾಯ ಕಡಿಮೆ ಆಗಿತ್ತು ಮತ್ತು ಖರ್ಚು ಜಾಸ್ತಿಯಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ವರ್ಷಕ್ಕೆ 7 ಲಕ್ಷ ಸಂಪಾದನೆ ಮಾಡುತ್ತಿದ್ದರು. ನನಗೆ ನನ್ನ ಮನೆಯ ನಿರ್ವಹಣೆಗೆ ತಿಂಗಳಿಗೆ ರೂ. 10 ಸಾವಿರ ಖರ್ಚು ಆಗುತ್ತದೆ. ನನಗೆ ಒಬ್ಬರೇ ಮಗ, ಆತ ಈಗ 6 ನೇ ತರಗತಿ ಓದುತ್ತಿದ್ದಾನೆ. ನನ್ನ ಮಗನ

ವಿಧ್ಯಾಭ್ಯಾಸ ಮತ್ತು ಇತರ ಖರ್ಚಿಗಾಗಿ ರೂ. 1 ಲಕ್ಷ ವರ್ಷಕ್ಕೆ ಬೇಕಾಗುತ್ತದೆ. ನನಗೆ ದ್ವಿಚಕ್ರ ವಾಹನ ಇರುತ್ತದೆ. ಅದರ ಖರ್ಚು ತಿಂಗಳಿಗೆ 4-5 ಸಾವಿರ ಬೇಕಾಗುತ್ತದೆ. ನಾವು ಮನೆಯಲ್ಲಿ 6 ಜನ ಸದಸ್ಯರು ಇರುತ್ತೇವೆ. ಮನೆಯ ಸದಸ್ಯರ ನಿರ್ವಹಣೆಗೆ ತಿಂಗಳಿಗೆ 7-8 ಸಾವಿರ ಖರ್ಚಾಗುತ್ತದೆ. ನಾನು Axix Bank, Devenahalli Branch ನಲ್ಲಿ ರೂ. 10 ಲಕ್ಷ ಸಾಲವನ್ನು ಪಡೆದಿರುತ್ತೇನೆ. ಅದಕ್ಕೆ ಪ್ರತಿ ತಿಂಗಳು ರೂ. 20 ಸಾವಿರ ಪಾವತಿ ಮಾಡಬೇಕಾಗುತ್ತದೆ. ಇತರೆ ಯಾವುದೇ ಸಾಲ ಮಾಡಿಲ್ಲ. ನನಗೆ ಮನೆಯ ಸದಸ್ಯರ ಮತ್ತು ನನ್ನ ವೈದ್ಯಕೀಯ ಖರ್ಚಿಗಾಗಿ ವರ್ಷಕ್ಕೆ ರೂ. 30 ಸಾವಿರ ಬೇಕಾಗುತ್ತದೆ. ನಾನು ಎ ಪಿ ಎಲ್ ಪಡಿತರ ಚೀಟಿಯನ್ನು ಹೊಂದಿದ್ದೇನೆ. ನಾನು ಬಿ ಪಿ ಎಲ್ ಕಾರ್ಡನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿಲ್ಲ. ಆದಾಯ ಪ್ರಮಾಣ ಪತ್ರ ಮಗುವಿನ ಸಂಬಂಧವಾಗಿ ಮಾಡಿಸಿದ್ದೇನೆ, ಅದನ್ನು ಹಾಜರುಮಾಡಲು ತೊಂದರೆ ಇಲ್ಲ.

3. ಆರೋಪಿಗೆ ಕಳುಹಿಸಿದ ನೋಟಿಸ್ ತಲುಪಿರುತ್ತದೆ. ಅದರ ಬಗ್ಗೆ ಸಹಿ ಮಾಡಿ ಕೊಟ್ಟಿರುವ ದಾಖಲೆಯನ್ನು ನೋಡಿಲ್ಲ. ಸಾಕ್ಷಿಗೆ ನಿಪಿ 5 ಅಂಚೇ ಸ್ವೀಕೃತಿ ಪತ್ರವನ್ನು ತೋರಿಸಿ ಅದರಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 5 ನ್ನು ಈ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನಿಪಿ-3 ನೋಟಿಸಿನಲ್ಲಿ ಏನು ವಿಚಾರ ಬರೆದಿದೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-3 ನ್ನು ಇದೇ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಆರೋಪಿಯ ಮೊಬೈಲ್ ನಂಬರ್ ಗೊತ್ತಿಲ್ಲ ಆದರೆ ನನ್ನ ಮೊಬೈಲ್ ನಲ್ಲಿದೆ. ನಾನು ನನ್ನ ಮೊಬೈಲ್ ಸಂಖ್ಯೆಯ ವಾಟ್ಸ್ ಆ್ಯಪ್ ನ್ನು ಹೊಂದಿರುತ್ತೇನೆ. ವಾಟ್ಸ್ ಆ್ಯಪ್

ಮೂಲಕ ಲೀಗಲ್ ನೋಟಿಸ್ ಕಳುಹಿಸಿಲ್ಲ, ಆ ಬಗ್ಗೆ ಮೆಸೇಜ್ ಕೂಡ ಮಾಡಿಲ್ಲ. ನಮ್ಮ ವಕೀಲರ ಮೂಲಕ ನೋಟಿಸ್ಸನ್ನು ದಿನಾಂಕ 09-03-2022 ರಂದು ಕಳುಹಿಸಿದ್ದೆ. ಅವರಿಗೆ ಯಾವಾಗ ಜಾರಿಯಾಯಿತು ಎಂಬ ಬಗ್ಗೆ ನಾನು ತಿಳಿದುಕೊಳ್ಳಲಿಲ್ಲ. ನೋಟಿಸ್ ಕಳುಹಿಸಿದ ಮೇಲೆ ನಾನು ಆರೋಪಿಗೆ ಸಂಪರ್ಕ ಮಾಡಿಲ್ಲ.

4. ಆರೋಪಿಯು ವ್ಯವಸಾಯ ಮತ್ತು ಚೀಟಿ ವ್ಯವಹಾರ ಮಾಡುತ್ತಾರೆ. ಅವರು ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ. ಅವರು ತಿಂಗಳಿಗೆ ಅಥವಾ ವರ್ಷಕ್ಕೆ ಎಷ್ಟು ಸಂಪಾದನೆ ಮಾಡುತ್ತಾರೆ ಗೊತ್ತಿಲ್ಲ. ಆರೋಪಿಯು ಹಣವನ್ನು ದಿ. 08-01-2022 ರಂದು ಬಂದು ಕೇಳಿದ್ದರು. ಅವರು ನಮ್ಮ ಮನೆಗೆ ಬಂದು ಕೇಳಿದ್ದರು. ನಾನು ಅವರಿಗೆ ದಿನಾಂಕ 16-01-2022 ರಂದು ಹಣವನ್ನು ಕೊಟ್ಟೆ, ನಮ್ಮ ಮನೆಯಲ್ಲಿಯೇ ಕೊಟ್ಟೆ. ಆಗ ಬೇರೆ ಯಾರು ಇರಲಿಲ್ಲ. ಮನೆಯಲ್ಲಿಯೇ ಹಣ ಕೇಳಿದ್ದರು ಮತ್ತು ಅಲ್ಲೆ ಕೊಟ್ಟೆ ಎಂಬ ವಿಚಾರವನ್ನು ಫಿರ್ಯಾದಿನಲ್ಲಿ ಹೇಳಿ ಬರೆಸಿಲ್ಲ. ಸಾಕ್ಷಿಗೆ ದೂರನ್ನು ತೋರಿಸಿ ಅದರಲ್ಲಿ ಏನೇನು ವಿಚಾರ ಬರೆದಿದೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನೇ ವಿಚಾರಗಳನ್ನು ಹೇಳಿ ಬರೆಸಿದ್ದು. ಆ ರೀತಿ ದೂರಿನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ನಾನೇ ಹೇಳಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ.

5. ಹಣವನ್ನು ಕೊಟ್ಟ ದಿನವೇ ಆರೋಪಿ ಚೆಕ್ಕನ್ನು ನೀಡಿದರು. ನಾನು ಆರೋಪಿಗೆ ದಿ. 16-01-2022 ರಂದು 4 ಲಕ್ಷ ಹಣವನ್ನು ಹಾಗೂ 17-01-2022 ರಂದು ಉಳಿದ 4 ಲಕ್ಷ ಹಣವನ್ನು ಕೊಟ್ಟಿದ್ದೆ. ಆ ರೀತಿ 2 ಬಾರಿ ಆದಂತೆ ಹಣವನ್ನು ಕೊಟ್ಟೆ ಎಂದು ದೂರಿನಲ್ಲಿ ಬರೆದಿರುವ ಬಗ್ಗೆ ಗೊತ್ತಿಲ್ಲ. 2 ಬಾರಿ ಹಣವನ್ನು ಕೊಡುವಾಗಲು

ಬೇರೆ ಯಾರು ಇರಲಿಲ್ಲ. ಆ ರೀತಿ ಹಣವನ್ನು ಮನೆಯಲ್ಲಿಯೇ ಕೊಟ್ಟಿದ್ದೆ. ಚೆಕ್ಕನ್ನು 16-01-2022 ರಂದೇ ಕೊಟ್ಟಿದ್ದರು. ನಾನು ನಗದಾಗಿಯೇ ಹಣವನ್ನು ಕೊಟ್ಟಿದ್ದೆ. 3 ಲಕ್ಷಕ್ಕಿಂತ ಮೇಲೆ ನಗದಾಗಿ ಹಣದ ವ್ಯವಹಾರ ಮಾಡಬಾರದು ಎಂದರೆ ಗೊತ್ತಿಲ್ಲ. ನನಗೆ ರೂ. 8 ಲಕ್ಷ ಹಣವನ್ನು ಸಾಲವಾಗಿ ಕೊಡುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಿಂತ ಮೊದಲು ನನಗೂ ಮತ್ತು ಆರೋಪಿಗೂ ಆದ ಹಣದ ವ್ಯವಹಾರ ಸಂಬಂಧವಾಗಿ ಆರೋಪಿಗೆ ನನಗೆ ರೂ. 50 ಸಾವಿರ ಹಣವನ್ನು ಫೋನ್ ಪೇ ಮೂಲಕ ಹಾಕಿದ್ದರು. ನಾನು ಕೂಡ ಅವರಿಗೆ ಫೋನ್ ಪೇ ಮೂಲಕ 5-10 ಸಾವಿರ ಹಣವನ್ನು ಕೊಟ್ಟಿರುತ್ತೇನೆ. ನಾನು 8 ಲಕ್ಷ ಹಣವನ್ನು ಆರೋಪಿಗೆ ಕೊಟ್ಟ ಬಗ್ಗೆ ಬೇರೆ ದಾಖಲೆ ಇಲ್ಲ. ನಾನು ಚೆಕ್ ಅಥವಾ ಡಿಡಿ ಮೂಲಕ ಆ ಹಣವನ್ನು ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಗದಾಗಿಯೇ ಕೊಟ್ಟೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಆರೋಪಿ ನನ್ನ ಬಳಿ ಹಣವನ್ನು ಕೇಳಿಲ್ಲ ಮತ್ತು ಪಡೆದಿಲ್ಲ ಎಂದರೆ ಸರಿಯಲ್ಲ. ಈ ಚೆಕ್ಕಿನ ಸಂಬಂಧವಾಗಿ ನನಗೂ ಆರೋಪಿಗೂ ಹಣದ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಬ್ಯಾಂಕಿನ ಸಂಖ್ಯೆ ಗೊತ್ತಿಲ್ಲ. ಅವರು ಚೆಕ್ ಕೊಟ್ಟ ದಿನದ 2 ದಿನಗಳ ಒಳಗಾಗಿ ಅದನ್ನು ನಗದೀಕರಣಕ್ಕಾಗಿ ಹಾಜರುಮಾಡಿದ್ದೆ. ಬ್ಯಾಂಕಿನವರು ಹಿಂಬರಹಣವನ್ನು 4-5 ದಿನಗಳ ನಂತರ ಕೊಟ್ಟರು. ಹಣ ಇಲ್ಲ ಎಂದು ವಾಪಸ್ಸು ಆಗಿತ್ತು. ಆ ನಂತರ 4-5 ದಿನಗಳ ಮೇಲೆ ವಕೀಲರ ಮೂಲಕ ನೋಟಿಸ್ ಕಳುಹಿಸಿದೆ. ಆ ನಂತರ ಈ ಪ್ರಕರಣವನ್ನು ಸಲ್ಲಿಸಿದ್ದೆ.

6. ನಿಪಿ-1 ರಲ್ಲಿ ಅಕ್ಷರಗಳು ಮತ್ತು ಮೊತ್ತ ಹಾಗೂ ಸಹಿ ಪರಸ್ಪರ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿ ಒಂದೇ ರೀತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅವುಗಳ ನಡುವೆ ಪರಸ್ಪರ ಸುಮಾರು ವರ್ಷಗಳ ಅಂತರದ ಬರವಣಿಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನನ್ನ ದೂರು, ಪ್ರಮಾಣ ಪತ್ರ ಹಾಗೂ ನೋಟಿಸ್ ನಲ್ಲಿ ವಿಚಾರಗಳು ಪರಸ್ಪರ ಬೇರೆ ಬೇರೆಯಾಗಿವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.